# ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ರವರ ನ್ಯಾಯಾಲಯ, ಯಳಂದೂರು.

**C.C No**. 1130/2022

| | | |
|---|---|---|
| ಸಾಕ್ಷಿದಾರರ ಹೆಸರು: | ಸೌಂದರ್ಯ | ಪ್ರಮಾಣ ಮಾಡಿದ ದಿನಾಂಕ 14.02.2025. |
| ಗಂಡನ ಹೆಸರು: | ಸಿದ್ದರಾಜು | |
| ವಯಸ್ಸು: | 28 ವರ್ಷ | |
| ವೃತ್ತಿ: | ಗೃಹಿಣಿ | |
| ವಾಸಸ್ಥಳ: | ವೈ.ಕೆ ಮೋಳೆ | DW−1 |

**ಮುಖ್ಯ ವಿಚಾರಣೆಃ– ಆರೋಪಿ ಪರ ವಕೀಲರಾದ ಶ್ರೀ A.R ರವರಿಂದಃ–**

ನನಗೆ ಈ ಪ್ರಕರಣದ ಪಿರ್ಯಾದುದಾರರ ಪರಿಚಯವಿಲ್ಲ. ನಾನು ಪಿರ್ಯಾದುದಾರರ ಜೊತೆ ಯಾವುದೇ ಹಣಕಾಸಿನ ವ್ಯವಹಾರವನ್ನು ಮಾಡಿರುವುದಿಲ್ಲ. ನಾನು ಪಿರ್ಯಾದುದಾರರಿಗೆ ಯಾವುದೇ ದಾಖಲಾತಿಗಳನ್ನು ಬರೆದುಕೊಟ್ಟಿಲ್ಲ. ನನ್ನ ಚೆಕ್ ಅಂದರೆ ನಿಪಿ-**1** ಕಳುವಾಗಿತ್ತು. **2022** ನೇ ಸಾಲಿನ ಮಾರ್ಚ್ **25** ಅಥವಾ **26** ರಂದು ನನ್ನ ಚೆಕ್ ಕಳುಹಿವಾಗಿತ್ತು. ನಾನು ಈ ಚೆಕ್ ಕಳುವಾಗಿರುವ ಬಗ್ಗೆ ನನ್ನ ಬ್ಯಾಂಕಿಗೆ ಮಾಹಿತಿಯನ್ನು ಸಲ್ಲಿಸಿದ್ದೆ. ಸಾಕ್ಷಿಯು ತಾವು ಸಲ್ಲಿಸಿರುವ ಅರ್ಜಿಯ ಸ್ವೀಕೃತಿಯನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ಈಗ ನಿಡಿ-**1** ಎಂದು ಗುರುತಿಸಲಾಯಿತು. ನಿಡಿ-**1** ರ ಆಧಾರದ ಮೇರೆಗೆ ಬ್ಯಾಂಕಿನವರು ನೀಡಿರುವ **stop payment** ಮಾಡಿರುವ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಡಿ-**2** ಎಂದು ಗುರುತಿಸಲಾಯಿತು. ಪಿರ್ಯಾದುದಾರರು ಅವರ ವಕೀಲರ ಮೂಲಕ ಈ ಪ್ರಕರಣವನ್ನು ದಾಖಲಿಸುವ ಪೂರ್ವದಲ್ಲಿ ನನಗೆ ನೋಟಿಸನ್ನು ನೀಡಿದ್ದರು. ನನಗೆ ಆ ಸಮಯದಲ್ಲಿ ಆರೋಗ್ಯ ಸರಿಯಿರಲಿಲ್ಲ ಆದ್ದರಿಂದ ನಾನು ನೋಟಿಸ್‌ಗೆ ಉತ್ತರವನ್ನು ಕೊಟ್ಟಿರುವುದಿಲ್ಲ. ನನಗೆ ಪಿರ್ಯಾದುದಾರರು ನೋಟಿಸ್ ನೀಡಿದ ಸಂದರ್ಭದಲ್ಲಿ ಜಾಂಡಿಸ್ ಆಗಿತ್ತು. ನಾನು ನಾಟೀ ವೈದ್ಯರಿಂದ ಜಾಂಡಿಸ್‌ಗೆ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ.

(ಪಾಟೀ ಸವಾಲು: ಪಿರ್ಯಾದುದಾರರ ಪರ ವಕೀಲರರು ಪಾಟೀ ಸವಾಲಿಗೆ ಸಮಯಾವಕಶವನ್ನು ಕೋರಿದ್ದರಿಂದ ಆಲಿಸಿ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

14.02.2025

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದ ನ್ಯಾಯಾಲಯ ಯಳಂದೂರು.